# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 14/2018**

**ದೋ.ಸಾ. : 01 ಫ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ನೇತ್ರಾವತಿ ಹನುಮಾ ಮುಕ್ರಿ |
| ತಂದೆಯ ಹೆಸರು | : | ಹನುಮಾ ಮುಕ್ರಿ |
| ವಯಸ್ಸು | : | 27 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಕಡತೋಕ, ತಾಃ ಹೊನ್ನಾವರ |

**ದಿನಾಂಕಃ 30-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-6 ನನ್ನ ತಾಯಿಯ ಅಕ್ಕನ ಮಗಳು ಅಂದರೆ ನನಗೆ ಸಂಬಂಧದಲ್ಲಿ ಅಕ್ಕನಾಗಬೇಕು. ನಾನು ಚಿಕ್ಕವಯಸ್ಸಿನಲ್ಲಿರುವಾಗಲೇ ತಂದೆ-ತಾಯಿ ತೀರಿಕೊಂಡ ಕಾರಣ ನಾನು ಚಾಸಾ-6 ರವರ ಮನೆಯಲ್ಲಿ ಬೆಳೆದಿರುತ್ತೇನೆ ಹಾಗೂ ನಾನು ಅವರನ್ನು ಚಿಕ್ಕಮ್ಮ ಎಂದು ಕರೆಯುತ್ತೇನೆ. ಚಾಸಾ-6 ರವರ ಮನೆ ಹೊನ್ನಾವರದ ತೊಪ್ಪಲಕೇರಿಯಲ್ಲಿರುತ್ತದೆ. ನಾನು ಕಳೆದ ವರ್ಷ ಮದುವೆ ಮಾಡಿಕೊಂಡಿದ್ದು, ಈಗ ನಾನು ನನ್ನ ಗಂಡನ ಮನೆಯಾದ ಕಡತೋಕದಲ್ಲಿ ವಾಸವಾಗಿರುತ್ತೇನೆ. ಮದುವೆಗೂ ಮೊದಲು ನಾನು ಚಾಸಾ-6 ರವರ ಮನೆಯಲ್ಲಿದ್ದಾಗ, ಅವರ ಮನೆಯಲ್ಲಿ, ಚಾಸಾ-6 ಮತ್ತು ಅವರ ಗಂಡ, ಚಾಸಾ-6 ರವರ ತಾಯಿ ಹಾಗೂ ಅವರ 2 ಜನ ಮಕ್ಕಳು ಮತ್ತು ನಾನು ಇದ್ದೆವು. ನಾನು 10 ನೇ ತರಗತಿ ವರೆಗೆ ಹೊನ್ನಾವರದ ಪ್ರೌಢ ಶಾಲೆಯಲ್ಲಿ ಕಲಿತಿರುತ್ತೇನೆ. 2016 ರಲ್ಲಿ ನಾನು ದ್ವಿತಿಯ ಪಿ.ಯು.ಸಿ ಯ ಬಾಹ್ಯ ಶಿಕ್ಷಣಕ್ಕೆ ದಾಖಲಾಗಿರುತ್ತೇನೆ ಹಾಗೂ ಹೊನ್ನಾವರದ ಮಾನಸ ಕೋಚಿಂಗ್ ಸೆಂಟರ್ ಗೆ ಪಾಠಕ್ಕಾಗಿ ಹೋಗುತ್ತಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು.

2. ನಾನು ಮಾನಸ ಕೋಚಿಂಗ್ ಸೆಂಟರ್ ಗೆ ಪಾಠಕ್ಕೆ ಹೋಗುವಾಗ ಮತ್ತು ಮನೆಗೆ ಬರುವಾಗ ಆರೋಪಿಯು ತನ್ನ ಗೂಡ್ಸ್ ರೀಕ್ಷಾದಲ್ಲಿ ಬಂದು, ರಸ್ತೆಯ ಮೇಲೆ ನನ್ನನ್ನು ಮಾತನಾಡಿಸುತ್ತಿದ್ದ ಹಾಗೂ ನಾನು ನಿನ್ನನ್ನು ಪ್ರೀತಿಸುತ್ತೇನೆ, ನಿನ್ನನ್ನು ಮದುವೆಯಾಗುತ್ತೇನೆ ಎಂದು ಹೇಳುತ್ತಿದ್ದ ಹಾಗೂ ನಮ್ಮ ಮನೆಗೂ ಸಹ ಬಂದು ಹೋಗುತ್ತಿದ್ದ. ಆರೋಪಿಯು ನಮ್ಮ ಮನೆಗೆ ಬಂದು ಹೋಗುತ್ತಿದ್ದ ಬಗ್ಗೆ ಚಾಸಾ–6 ರವರು ನನ್ನ ಬಳಿ ಕೇಳಿದಾಗ, ನಾನು ಅವರಿಗೆ ಆರೋಪಿಯು ನನಗೆ ಪರಿಚಯದನು ಎಂದು ಹೇಳಿರುತ್ತೇನೆ. ಆತ ನಮ್ಮ ಮನೆಗೆ ಎಲ್ಲರೂ ಇರುವಾಗಲೂ ಬರುತ್ತಿದ್ದ ಹಾಗೂ ನಾನು ಒಬ್ಬಳೇ ಇರುವಾಗಲೂ ಸಹ ಬರುತ್ತಿದ್ದ.

3. ಹೀಗಿರುವಾಗ ದಿಃ 13–11–2016 ರಂದು ನಾನು ಮನೆಯಲ್ಲಿ ಒಬ್ಬಳೇ ಇದ್ದಾಗ, 12–00 ಗಂಟೆ ಸುಮಾರಿಗೆ, ಆರೋಪಿ ನಮ್ಮ ಮನೆಗೆ ಬಂದು, ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ, ನಿನ್ನನ್ನು ಮದುವೆಯಾಗುತ್ತೇನೆ ಅಂತಾ ಹೇಳಿ, ನಂಬಿಸಿ, ನನಗೆ ಹಣದ ಅವಶ್ಯಕತೆ ಇದೆ, ಸ್ವಲ್ಪ ಹಣ ಕೊಡು ಎಂದು ಕೇಳಿದ, ಆಗ ನಾನು ಇಲ್ಲ ಎಂದು ಹೇಳಿರುತ್ತೇನೆ, ಆಗ ಆರೋಪಿಯು ನಿನ್ನ ಚಿಕ್ಕಮ್ಮನ ಬಳಿ ಹಣ ಪಡೆದು, ನನಗೆ ಕೊಡು ಎಂದು ಕೇಳಿದ, ಆಗ ನಾನು ಆಗುವುದಿಲ್ಲ ಎಂದು ಹೇಳಿರುತ್ತೇನೆ. ಆಗ ಆರೋಪಿಯು ನನ್ನ ಮೈ–ಕೈಯನ್ನು ಮುಟ್ಟಿ ಬಟ್ಟೆಗಳನ್ನು ಹಿಡಿದು ಎಳೆದಾಡಿ, ಬಲತ್ಕಾರ ಮಾಡುತ್ತೇನೆ ಎಂದು ಹೆದರಿಸಿದನು. ಆಗ ನಾನು ನನ್ನ ಬಳಿ ಹಣ ಇಲ್ಲ ಎಂದು ಹೇಳಿ, ಮನೆಯಲ್ಲಿಟ್ಟಿದ್ದ ನನ್ನ ಚಿಕ್ಕಮ್ಮನ ಬಂಗಾರದ ಮಂಗಳ ಸೂತ್ರವನ್ನು ಕೊಟ್ಟು, "ನೀನು ಇದನ್ನು ಅಡವಿಟ್ಟು, ಹಣ ತೆಗೆದುಕೊ, ಒಂದು ವಾರದ ಒಳಗೆಡೆ ಬಿಡಿಸಿ ಕೊಡು" ಎಂದು ಹೇಳಿರುತ್ತೇನೆ ಹಾಗೂ ಈ ವಿಷಯವನ್ನು ನನ್ನ ಚಿಕ್ಕಮ್ಮಗೆ ತಿಳಿಸಬೇಡ ಎಂದು ಹೇಳಿರುತ್ತೇನೆ. ನಾನು ಆರೋಪಿಗೆ ಕೊಟ್ಟ ಬಂಗಾರದ ಮಂಗಳ ಸೂತ್ರವು ಮೂರುವರೆ ತೊಲ ಇರುತ್ತದೆ.

4. ಆರೋಪಿ ನನ್ನಿಂದ ಬಂಗಾರದ ಮಂಗಳ ಸೂತ್ರವನ್ನು ತೆಗೆದುಕೊಂಡು ಹೋದ ಒಂದು ವಾರದ ನಂತರವೂ ಸಹ ಆತ ಹಿಂದಿರುಗಿಸಿರುವುದಿಲ್ಲ. ನಂತರ ನಾನು ಆತನಿಗೆ ಕರೆ ಮಾಡಿದರೆ, ಆತ ಕರೆಗಳನ್ನು ಸ್ವೀಕರಿಸುತ್ತಿರಲಿಲ್ಲ. ಆದ್ದರಿಂದ ನಾನು ಮನೆಯಲ್ಲಿ ಬೇಜಾರಿನಲ್ಲಿರುತ್ತಿದ್ದ ಕಾರಣ, ದಿಃ02–12–2016 ರಂದು ಚಾಸಾ–6 ರವರು ನನ್ನ ಬಳಿ ಯಾಕೆ ಬೇಜಾರಿನಲ್ಲಿದ್ದಿಯಾ? ಎಂದು ಕೇಳಿದ್ದು, ನಾನು ಚಾಸಾ–6 ರವರಿಗೆ ಈ ಘಟನೆಯ ಬಗ್ಗೆ ಹೇಳಿರುತ್ತೇನೆ. ಅದೇ ದಿನ ಮದ್ಯಾಹ್ನ ಚಾಸಾ–6 ರವರು ಆರೋಪಿಯ ವಿರುದ್ದ ದೂರು ನೀಡಲು ನನ್ನನ್ನು ಹೊನ್ನಾವರ

ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ಮಧ್ಯಾಹ್ನ 03–30 ಗಂಟೆ ನಾನು ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

5. ಅದೇ ದಿನ ಸಂಜೆಗೆ ಹೊನ್ನಾವರ ಪೊಲೀಸರು ಪಂಚನಾಮೆಗಾಗಿ ನಮ್ಮ ಮನೆಯ ಹತ್ತಿರ ಪಂಚರಾದ ಚಾಸಾ–2 ಮತ್ತು 3 ರವರೊಂದಿಗೆ ಬಂದಿದ್ದರು. ನಾನು ಪೊಲೀಸರಿಗೆ ಘಟನಾ ಸ್ಥಳವಾದ ನಮ್ಮ ಮನೆಯನ್ನು ತೋರಿಸಿರುತ್ತೇನೆ. ಅಲ್ಲಿ ಪೊಲೀಸರು ಸಂಜೆ 05–15 ರಿಂದ 06–15 ರವರಗೆ ಪಂಚನಾಮೆ ಮಾಡಿ, ನಕಾಶೆ ತಯಾರಿಸಿ, ಪೋಟೋ ತೆಗೆದಿರುತ್ತಾರೆ ಹಾಗೂ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆ, ನಕಾಶೆ ಹಾಗೂ ಪೋಟೋವನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–2 ಎಂದು, ನಕಾಶೆಯನ್ನು ನಿಪಿ–3 ಎಂದು ಹಾಗೂ ಪೋಟೋವನ್ನು ನಿಪಿ–4 ಎಂದು ಗುರುತಿಸಲಾಯಿತು ಹಾಗೂ ಅವುಗಳಲ್ಲಿರುವ ಸಹಿಯನ್ನು ನಿಪಿ–2(ಎ) ಎಂದು, ನಿಪಿ–3(ಎ) ಎಂದು ಗುರುತಿಸಲಾಯಿತು.

6. ಆರೋಪಿಯ ವಿರುದ್ಧ ದೂರು ನೀಡಿದ ನಂತರವೂ ಅಂದರೆ ದಿಃ 12–01–2017 ರಂದು ನಾನು ಬೇಜಾರಿನಲ್ಲಿರುವುದನ್ನು ನೋಡಿ, ಚಾಸಾ–6 ರವರು ನನ್ನ ಬಳಿ ವಿಚಾರಿಸಿದಾಗ, ನಾನು ದೂರು ನೀಡುವಾಗ ಕೆಲವೊಂದು ವಿಷಯಗಳನ್ನು ನಿಮ್ಮ ಬಳಿ ಹೇಳಿರುವುದಿಲ್ಲ, ಏಕೆಂದರೆ ನೀವು ನನಗೆ ಬೈಯುತ್ತೀರಾ? ಹಾಗೂ ಅದು ನನ್ನ ಮರ್ಯಾದೆ ಪ್ರಶ್ನೆಯಾದ ಕಾರಣ, ನಾನು ಹೇಳಿರುವುದಿಲ್ಲ ಎಂದು ಹೇಳಿರುತ್ತೇನೆ. ಆಗ ಚಾಸಾ–6 ರವರು ಸಮಾಧಾನದಿಂದ ವಿಷಯ ಏನೆಂದು ಕೇಳಿದಾಗ, "ನಾನು ಆರೋಪಿಗೆ ಬಂಗಾರವನ್ನು ಕೊಡುವ ಮೊದಲೇ ಅಂದರೆ 2016 ನೇ ಇಸ್ವಿಯಲ್ಲಿ ಆರೋಪಿಯು ನನಗೆ ನಿನ್ನನ್ನು ಪ್ರೀತಿಸುತ್ತೇನೆ,ಮದುವೆಯಾಗುತ್ತೇನೆ ಎಂದು ನಂಬಿಸಿ, ಹೊನ್ನಾವರದ ಬಾಸ್ಕೇರಿ ಸರಕಾರಿ ಶಾಲೆಯ ಹಿಂದುಗಡೆ ಇರುವ ಅರಣ್ಯ ಪ್ರದೇಶಕ್ಕೆ ನನ್ನನ್ನು ಕರೆದುಕೊಂಡು ಹೋಗಿ, ನನ್ನ ಇಚ್ಛೆಗೆ ವಿರುದ್ಧವಾಗಿ 3–4 ಬಾರಿ ದೈಹಿಕ ಸಂಭೋಗ ಮಾಡಿರುತ್ತಾನೆ" ಎಂದು ಹೇಳಿರುತ್ತೇನೆ. ಈ ವಿಷಯವನ್ನು ಕೇಳಿದ ಚಾಸಾ–6 ರವರು ನನಗೆ ಈ ವಿಷಯವನ್ನು ದೂರು ನೀಡುವಾಗಲೇ ಯಾಕೇ ಹೇಳಲಿಲ್ಲ ಎಂದು ಕೇಳಿರುತ್ತಾರೆ ಹಾಗೂ ದಿಃ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ನಾನು ಅಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಹಾಗೂ ಸದರಿ

ಹೇಳಿಕೆಗೆ ನಾನು ಸಹಿಯನ್ನು ಮಾಡಿರುತ್ತೇನೆ. ನನ್ನ ಹೇಳಿಕೆ ಪಡೆದುಕೊಂಡ ನಂತರ ಅದೇ ದಿನ ಪೊಲೀಸರು ನನ್ನನ್ನು ವೈದ್ಯಕೀಯ ಪರೀಕ್ಷೆಗಾಗಿ ಕಳುಹಿಸಿರುತ್ತಾರೆ, ಆದರೆ ವೈದ್ಯರು ಮರುದಿನ ನನ್ನನ್ನು ಪರೀಕ್ಷೆಗೆ ಒಳಪಡಿಸಿರುತ್ತಾರೆ. ವೈದ್ಯರು ನನ್ನ ಸಮ್ಮತಿಯೊಂದಿಗೆ ನನ್ನ ಸಹಿಯನ್ನು ಪಡೆದುಕೊಂಡು, ನನಗೆ ವೈದ್ಯಕೀಯ ಪರೀಕ್ಷೆ ಮಾಡಿರುತ್ತಾರೆ. ಸಾಕ್ಷಿಯು ವೈದ್ಯಕೀಯ ಪರೀಕ್ಷಾ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

7. ವೈದ್ಯಕೀಯ ಪರೀಕ್ಷೆಯ ನಂತರ ಪೊಲೀಸರು ಬಾಸ್ಕೇರಿ ಸರಕಾರಿ ಶಾಲೆಯ ಹಿಂಬದಿಯಲ್ಲಿರುವ ಅರಣ್ಯ ಪ್ರದೇಶದಲ್ಲಿ ಪಂಚನಾಮೆಗಾಗಿ 2 ಜನ ಪಂಚರೊಂದಿಗೆ ಬಂದಿದ್ದು, ನಾನು ಅಲ್ಲಿ ಪೊಲೀಸರಿಗೆ ಆರೋಪಿಯು ನನ್ನೊಂದಿಗೆ ದೈಹಿಕ ಸಂಭೋಗ ಮಾಡಿದ ಸ್ಥಳವನ್ನು ತೋರಿಸಿರುತ್ತೇನೆ. ಅಲ್ಲಿ ಪೊಲೀಸರು ಪಂಚರ ಸಮಕ್ಷಮ ಪಂಚನಾಮೆ ಮಾಡಿ, ನಕಾಶೆ ತಯಾರಿಸಿ, ಪೋಟೋವನ್ನು ತೆಗೆದಿರುತ್ತಾರೆ ಹಾಗೂ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆ, ನಕಾಶೆ ಹಾಗೂ ಪೋಟೋವನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-6 ಎಂದ, ನಕಾಶೆಯನ್ನು ನಿಪಿ-7 ಎಂದು, ಪೋಟೋವನ್ನು ನಿಪಿ-8 ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಮತ್ತು ನಿಪಿ-7(ಎ) ಎಂದು ಗುರುತಿಸಲಾಯಿತು.

8. ಘಟನೆಯ ಬಗ್ಗೆ ನಾನು ಕುಮಟಾ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-9(ಎ) ಮತ್ತು 9(ಬಿ) ಎಂದು ಗುರುತಿಸಲಾಯಿತು. ಆರೋಪಿಯು ನನ್ನನ್ನು ಪ್ರೀತಿಸುತ್ತೇನೆ,ಮದುವೆಯಾಗುತ್ತೇನೆ ಎಂದು ಹೇಳಿ ನಂಬಿಸಿ, ನನ್ನೊಂದಿಗೆ ಬಲವಂತವಾಗಿ ಲೈಂಗಿಕ ಸಂಭೋಗ ಮಾಡಿ, ಮೋಸ ಮಾಡಿರುತ್ತಾನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎಸ್.ಬಿ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ರೂ.500/- ಖರ್ಚು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ